ಒಂದಾಣೆ ಮಾಲೆ 339

ಭೋಜರಾಜನ ಕಥೆಗಳು

ಲೇಖಕ:

ಎಮ್. ಗೋಪಾಲಕೃಷ್ಣ ಭಟ್,
ವಿದ್ವಾನ್, ರಾಷ್ಟ್ರಭಾಷಾ ವಿಶಾರದ, ಎಡನಾಡು.

1962

(ಹಿಂದಿಯಿಂದ ಭಾಷಾಂತರ.) ಬೆಲೆ: ೧ ಆಣೆ.

ಒಂದಾಣೆ ಮಾಲೆ — ಮಂಗಳೂರು.

ಒಂದಾಣೆ ಮಾಲೆಯಲ್ಲಿ

ಒಗಟುಗಳ ಪ್ರಕಟಣೆಗಳು:

ಒಗಟುಗಳು
(ಪುಸ್ತಕ ನಂಬ್ರ 17)

ಜಾಣ್ಮೆಯ ಒಗಟುಗಳು
(ಪುಸ್ತಕ ನಂಬ್ರ 29)

ಒಗಟಿನ ಗೊಂಚಲು
(ಪುಸ್ತಕ ನಂಬ್ರ 104)

ಒಂದಾಣೆ ಮಾಲೆ, ಪ್ರಭಾತ ಆಫೀಸು,
ರಥಬೀದಿ, ಮಂಗಳೂರು-೧.

ಭೋಜರಾಜನ ಕಥೆಗಳು

೧

ಒಂದು ದಿನ ಭೋಜರಾಜನು ತನ್ನ ಆಸ್ಥಾನದಲ್ಲಿ ಕುಳಿತುಕೊಂಡಿದ್ದಾಗ, ಒಬ್ಬ ದೂತನು ಬಂದು, "ಮಹಾರಾಜಾ! ಓರ್ವ ವಿದ್ವಾಂಸರು ತಮ್ಮ ದರ್ಶನಕ್ಕಾಗಿ ಬಂದಿದ್ದಾರೆ. ಅವರೊಡನೆ ಅವರ ಪರಿವಾರವೂ ಇದೆ. ಏನಪ್ಪಣೆ?" ಎಂದು ವಿನಂತಿಸಿದನು.

ಭೋಜರಾಜನು ಒಂದು ನಿಮಿಷ ಆಲೋಚಿಸಿ, ಆ ಬಳಿಕ ಒಬ್ಬ ಸೇವಕನಿಂದ ಒಂದು ತಟ್ಟೆ ತುಂಬಾ ಹಾಲನ್ನು ತರಿಸಿದನು. ಹಾಲನ್ನು ದೂತನ ಕೈಯಲ್ಲಿ ಕೊಟ್ಟು, "ಇದನ್ನು ಬ್ರಾಹ್ಮಣನಿಗೆ ತೋರಿಸಿ, ಉತ್ತರವನ್ನು ತೆಗೆದುಕೊಂಡು ಬಾ. ಮಹಾರಾಜರು ಕೇಳಿದ ಪ್ರಶ್ನೆಯಿದೆಂದು ಹೇಳು" ಎಂದನು. ದೂತನು ಹಾಲಿನ ತಟ್ಟೆಯೊಡನೆ ಹೊರಟು, ಆ ವಿದ್ವಾಂಸನಲ್ಲಿಗೆ ಬಂದು, ಅವನಿಗೆ ಅದನ್ನು ಕೊಟ್ಟು, ಅದಕ್ಕುತ್ತರಕೊಡಬೇಕೆಂಬುದಾಗಿ ಮಹಾರಾಜರ ಆಜ್ಞೆಯಾಗಿದೆಯೆಂದು ತಿಳಿಸಿದನು.

ಆ ವಿದ್ವಾಂಸ ಬ್ರಾಹ್ಮಣನು ತುಸು ಯೋಚಿಸಿ, ಆ ಬಳಿಕ ಆ ಹಾಲಿಗೆ ಸಕ್ಕರೆಯನ್ನು ಬೆರಸಿ, ಅದನ್ನು ಹಿಂದೆ ಕೊಟ್ಟನು.

ದೂತನು ಪುನಃ ಭೋಜರಾಜನಲ್ಲಿಗೆ ಬಂದು ಬ್ರಾಹ್ಮಣನು ಕೊಟ್ಟ ಉತ್ತರವನ್ನು ತಿಳಿಸಿದನು. ಭೋಜರಾಜನಿಗೆ ಇದನ್ನು ಕೇಳಿ ಪರಮ ಸಂತೋಷವಾಯಿತು. ಅವನು ಮಂತ್ರಿಯೊಡನೆ, "ಈ ಬ್ರಾಹ್ಮಣನು ಬಹಳ ಚತುರನಾದ ವಿದ್ವಾಂಸನಾಗಿರುವನು. ಇವನು ನಮ್ಮ ಆಸ್ಥಾನದಲ್ಲಿ ಇತರ ಪಂಡಿತರೊಂದಿಗೆ ಇರಬೇಕು" ಎಂದು ಹೇಳಿದನು.

ಭೋಜರಾಜ ಮತ್ತು ಬ್ರಾಹ್ಮಣರೊಳಗೆ ನಡೆದ ಸ್ವಾರಸ್ಯದ ಈ ಪ್ರಶ್ನೋತ್ತರಗಳ ಅರ್ಥವು ಹೀಗಿತ್ತು: "ನನ್ನ ಆಸ್ಥಾನದಲ್ಲಿ ಬಹಳಷ್ಟು ವಿದ್ವಾಂಸರಿದ್ದಾರೆ. ಇನ್ನು ವಿದ್ವಾಂಸರಿಗೆ ಸ್ಥಳವಿಲ್ಲ" ಎಂಬ ಅರ್ಥದಿಂದ ಭೋಜರಾಜನು ಪೂರ್ತಿ ತುಂಬಿದ ಹಾಲಿನ ಲೋಟವನ್ನು ಕಳಿಸಿದನು. ಆ ಚತುರ ಬ್ರಾಹ್ಮಣನಾದರೋ, "ಹಾಲಿನಲ್ಲಿ ಸಕ್ಕರೆ ಬೆರೆತುಕೊಳ್ಳಲು

ಸಾಧ್ಯವಿದೆ. ಸಕ್ಕರೆ ಬೆರೆತ ಹಾಲು ರುಚಿಕರವೂ ಆಗುವುದು. ಅಂತೆಯೇ ನಾನು ನಿಮ್ಮ ಇತರ ವಿದ್ವಾಂಸರೊಡನೆ ಕೂಡಿಕೊಂಡರೆ ನಿಮ್ಮ ಒಡ್ಡೋಲಗದ ಕಾಂತಿಯು ಹೆಚ್ಚುವುದು" ಎಂಬ ಅಭಿಪ್ರಾಯದಲ್ಲಿ ಹಾಲಿನ ಲೋಟದಲ್ಲಿ ಸಕ್ಕರೆ ಹಾಕಿ ಕಳಿಸಿದನು. ಬ್ರಾಹ್ಮಣನ ಮನೋಗತವನ್ನು ಚತುರನಾದ ಭೋಜರಾಜನು ಅರ್ಥಮಾಡಿಕೊಂಡನು.

ಭೋಜರಾಜನು ಆ ಬ್ರಾಹ್ಮಣನನ್ನು ಆಸ್ಥಾನದಲ್ಲಿ ವಿದ್ವಾಂಸನಾಗಿ ನೇಮಿಸಿದ್ದರೂ, ಆತನನ್ನು ಇನ್ನೂ ಪರೀಕ್ಷಿಸುವ ಮನಸ್ಸುಮಾಡಿದನು. ತನ್ನ ಸೇವಕರ ಸಹಾಯದಿಂದ ಆ ಬ್ರಾಹ್ಮನಲ್ಲಿಗೆ ಹೋಗಿ ಉಳಿದುಕೊಂಡಿರುವ ಸ್ಥಳವನ್ನು ತಿಳಿದುಕೊಂಡು ಅವರಿದ್ದಲ್ಲಿಗೆ, ಕಟ್ಟಿಗೆಯವನ ವೇಷವನ್ನು ಧರಿಸಿ, ತಲೆಯಲ್ಲೊಂದು ಕಟ್ಟಿಗೆಯ ಹೊರೆಯನ್ನಿಟ್ಟುಕೊಂಡು ಹೋಗಿ ತಲಪಿದನು.

ಬ್ರಾಹ್ಮಣನ ಪರಿವಾರವು ಕೋಟೆಯ ಹೊರಗೆ ಇರುವ ನದಿಯ ದಡದಲ್ಲಿ ತಂಗಿಕೊಂಡಿತ್ತು. ತುಂಬಾ ಹಳೆಯ ಆಲದ ಮರದ ಬುಡದಲ್ಲಿ ಅವರು ವಿಶ್ರಮಿಸಿಕೊಳ್ಳುತ್ತಿದ್ದರು. ಭೋಜರಾಜನು ಅವರಿದ್ದಲ್ಲಿಗೆ ತಲಪುವ ವೇಳೆಗೆ ಕೋಟೆಯ ಬಾಗಿಲು ಮುಚ್ಚಲ್ಪಟ್ಟಿತು. ಕೂಡಲೇ ಕಟ್ಟಿಗೆಯವನ ವೇಷದಲ್ಲಿದ್ದ ಭೋಜರಾಜನು ಅವರ ಬಳಿಗೆ ಹೋಗಿ, "ಸ್ವಾಮಿ, ತಾವಾರು?" ಎಂಬುದಾಗಿ ಪ್ರಶ್ನಿಸಿದನು. ಬ್ರಾಹ್ಮಣನು ತನ್ನ ವಿಷಯಗಳನ್ನೆಲ್ಲಾ ಕಟ್ಟಿಗೆಯವನಿಗೆ ಸವಿಸ್ತಾರವಾಗಿ ಹೇಳಿದನು. ಆಗ ಆ ಕಟ್ಟಿಗೆಯವನು, "ಸ್ವಾಮೀ, ಈಗ ರಾತ್ರಿಯಾಯಿತು. ಕೋಟೆಯೊಳಗೆ ಇನ್ನು ಹೋಗುವಂತಿಲ್ಲ. ತಾವು ಇಲ್ಲೇ ವಿಶ್ರಮಿಸಿಕೊಳ್ಳಬೇಕಾಗುವುದು. ನಾನೂ ಈ ದಿನ ನನ್ನ ಕಟ್ಟಿಗೆ ಮಾರಲು ಸಾಧ್ಯವಾಗಲಿಲ್ಲ. ನಾಳೆಯ ದಿನ ಬೆಳಿಗ್ಗೆ ನಾನು ಕೋಟೆಯನ್ನು ಪ್ರವೇಶಿಸಿ, ಕಟ್ಟಿಗೆಯನ್ನು ವಿಕ್ರಯಿಸಬೇಕಾಗಿದೆ. ನನ್ನ ಮನೆಯು ದೂರವಾದುದರಿಂದ ಹಿಂದಿರುಗುವಂತಿಲ್ಲ. ನಾನೂ ತಮ್ಮೊಡನೆ ಇಲ್ಲೇ ಮಲಗಿಕೊಳ್ಳುವೆನು" ಎಂದು ಹೇಳಿದನು. ಬ್ರಾಹ್ಮಣನು ಇದಕ್ಕೆ ಸಮ್ಮತಿಸಿದನು.

ಕಳ್ಳರ ಭಯದಿಂದಲೂ, ದುಷ್ಟಪ್ರಾಣಿಗಳ ನಿವಾಸವಾದ ಕಾಡು ಹತ್ತಿರವಿರುವುದರಿಂದಲೂ, ರಾತ್ರಿಯ ವೇಳೆಗೆ ಪ್ರತಿ ಜಾಮಕ್ಕೊಬ್ಬನು ಎಚ್ಚರವಿದ್ದು ಕಾವಲು ನಡೆಸಬೇಕೆಂದು ನಿರ್ಣಯಿಸಿದರು. ಅಂತೆಯೇ

ಮೊದಲಿನ ಸರತಿ ಬ್ರಾಹ್ಮಣನದಾಯಿತು. ಆತನ ಪತ್ನಿ, ಮಗ ಮತ್ತು ಸೊಸೆ ಮಲಗಿ ನಿದ್ದೆ ಹೋದರು.

ಕಟ್ಟಿಗೆಯುವನು ಮಲಗಿದ್ದರೂ ಎಚ್ಚರದಲ್ಲೇ ಇದ್ದನು. ತುಸು ಹೊತ್ತು ಮೌನದಿಂದಿದ್ದು ಬಳಿಕ ಸಮಯ ಸಾಧಿಸಿ ಅವನು ಒಂದು ಶ್ಲೋಕದ ಅರ್ಧಭಾಗವನ್ನು ಹೇಳಿದನು, ಅದರ ಅರ್ಥವು ಹೀಗಿತ್ತು: "ಈ ಪ್ರಪಂಚದಲ್ಲಿ ಬರೇ ಮೂರು ವಸ್ತುಗಳು ಸಾರವುಳ್ಳವುಗಳು."

ಈ ಅರ್ಥ ಕ ಬ್ರಾಹ್ಮಣನು, ಆ ಶ್ಲೋಕವನ್ನು ಪೂರ್ತಿಮಾಡಿದನು. ಅದರ ಅರ್ಥವು ಹೀಗಿತ್ತು: "ಈ ಪ್ರಪಂಚದಲ್ಲಿ ಬರೇ ಮೂರು ವಸ್ತುಗಳು ಸಾರವುಳ್ಳವುಗಳು. ಅವು—ಕಾಶಿಯ ವಾಸ, ಸಜ್ಜನ ಸಹವಾಸ ಮತ್ತು ಈಶಸೇವೆ ಆಗಿವೆ."

ರಾತ್ರಿಯ ಎರಡನೆಯ ಜಾವ ಪ್ರಾರಂಭವಾಗಲು, ಬ್ರಾಹ್ಮಣನು ಮಲಗಿದನು. ಆತನ ಪತ್ನಿಯು ಎದ್ದು ಕುಳಿತು ಕಾವಲು ಕಾಯುತೊಡಗಿದಳು. ಸಮಯ ಸಾಧಿಸಿ ಕಟಿಗೆಯುವನು ಮೊದಲು ಹೇಳಿದ್ದ ಅರ್ಧ ಶ್ಲೋಕವನ್ನೇ ಹೇಳಿದನು. ರ ನ್ನು ಈ ರೀತಿ ಪೂರ್ತಿಮಾಡಿದಳು: "ಉಣ್ಣುವುದಕ್ಕೆ ಸಿಹಿಯಾದ ಮೊಸರು, ಪೂಜಿಸುವುದಕ್ಕೆ ದೇವರ ಎರಡು ಪಾದಕಮಲಗಳು ಇವೇ ಆ ಮೂರು ವಸ್ತುಗಳು."

ಎರಡನೆಯ ಜಾವವು ಕಳೆಯಿತು. ಈ ಬಾರಿ ಕಾವಲಿನ ಸರದಿಯು ಬ್ರಾಹ್ಮಣಪುತ್ರನದಾಗಿತ್ತು. ಕಟ್ಟಿಗೆಯುವನು ಸಮಯಾವಕಾಶವನ್ನೇ ನಿರೀಕ್ಷಿಸಿಕೊಂಡಿದ್ದು, ಬಳಿಕ ಕೇಳಿದನು: "ಲೋಕದಲ್ಲಿ ಯಾವ ಸ್ಥಳದಲ್ಲಿ ವಾಸಿಸುವುದರಿಂದ ಮಾನವನು ಸುಖಪಡುತ್ತಾನೆ?"

ಮಾವನ ಮನೆಯೇ ಅತಿ ಸುಖದ ಸ್ಥಾನವು. ಆದುದರಿಂದಲೇ ಶಿವನು ಹಿಮಾಲಯದಲ್ಲಿಯೂ, ವಿಷ್ಣುವು ಕ್ಷೀರಸಾಗರದಲ್ಲಿಯೂ ನೆಲೆನಿಂತಿದ್ದಾರೆ" ಎಂದು ಬ್ರಾಹ್ಮಣಕುಮಾರನು ಉತ್ತರಿಸಿದ.

ರಾತ್ರಿಯ ಕಡೆಯ ಜಾಮದಲ್ಲಿ ಬ್ರಾಹ್ಮಣನ ಸೊಸೆಯು ಕಾವಲು ಕಾಯಲು ಆರಂಭಿಸಿದಳು. ಆಕೆಯು ಆ ವರೆವಿಗೂ ನಿದ್ರಿಸಿರಲಿಲ್ಲ. ಅವಳು ಆ ವರೆವಿಗೂ ನಡೆದ ಪ್ರಶ್ನೋತ್ತರಗಳನ್ನು ಕೇಳಿದ್ದಳು. ಅವುಗಳ ಆಧಾರದಿಂದ ಈತನು ಭೋಜರಾಜನ ಪಂಡಿತವರ್ಗದವನೋ, ತಪ್ಪಿದಲ್ಲಿ ಭೋಜರಾಜನೋ ಆಗಿರಬಹುದೆಂದು ಊಹಿಸಿದಳು, ಆಕೆಯು ಈ

ರೀತಿಯಾಗಿ ಊಹಾಪ್ರಪಂಚದಲ್ಲೇ ತಲ್ಲೀನಳಾಗಿದ್ದಾಗ ಕಟ್ಟಿಗೆಯವನು, "ಪ್ರಪಂಚದ ಸಾರವೆಂದರೆ ನಾರಿ" ಎಂದು ಹೇಳಿದನು.

ಕೂಡಲೇ ಆಕೆಯು, "ಸತ್ಯ; ಒಂದು ವೇಳೆ ಈ ಜಗತ್ತಿನಲ್ಲಿ ಹೆಣ್ಣು ಇಲ್ಲದಿರುತ್ತಿದ್ದರೆ, ಬಡವರ ಬಂಧುವಾದ ಭೋಜರಾಜನು ಹೇಗೆ ಜನ್ಮಿಸುತ್ತಿದ್ದ?" ಎಂದು ಹೇಳಿದಳು.

ತನ್ನ ಗುಟ್ಟು ರಟ್ಟಾಯಿತೆಂದೂ, ತಾನಾರೆಂದು ಆಕೆ ತಿಳಿದುಕೊಂಡಿದ್ದಾಳೆಂದೂ ಕಟ್ಟಿಗೆಯವನ ವೇಷದಲ್ಲಿದ್ದ ಭೋಜರಾಜನಿಗೆ ತಿಳಿಯಿತು. ಬೆಳಗಾದ ಕೂಡಲೇ ಆತನು ಅಲ್ಲಿಂದೆದ್ದು ಅರಮನೆಗೆ ನಡೆದನು. ಅನಂತರ ತುಂಬಿದ ಒಡ್ಡೋಲಗದಲ್ಲಿ ಆ ವಿದ್ವಾಂಸ ಬ್ರಾಹ್ಮಣನಿಗೆ ಆಸ್ಥಾನದಲ್ಲಿ ವಿದ್ವಾಂಸನಾಗಿರುವಂತೆ ನೇಮಿಸಿದ್ದಲ್ಲದೆ, ಅವನಿಗೂ ಅವನ ಪರಿವಾರಕ್ಕೂ ಜೀವನೋಪಾಯವನ್ನು ಕಲ್ಪಿಸಿಕೊಟ್ಟನು.

o o o o o

೨

ಅದೊಂದು ದಿನ ಭೋಜರಾಜನು ಕವಿಗಳೊಂದಿಗೆ ಚರ್ಚೆಯನ್ನು ನಡೆಸುತ್ತಿದ್ದಾಗ ದೂತನೋರ್ವನು ಬಂದು, ಬ್ರಾಹ್ಮಣ ಸ್ತ್ರೀಯೊಬ್ಬಳು ಸನ್ನಿಧಿಯ ದರ್ಶನೋತ್ಸುಕಳಾಗಿರುವಳೆಂದು ತಿಳಿಸಿದನು ಅವಳನ್ನು ಆದರಪೂರ್ವಕವಾಗಿ ಒಳಗೆ ಕರೆತರುವಂತೆ ಭೋಜರಾಜನು ಆಜ್ಞೆಯಿತ್ತು, ಆ ದೂತನನ್ನು ಕಳಿಸಿದನು.

ಸ್ತ್ರೀಯು ಒಳಗೆ ಬಂದಳು. ಭೋಜರಾಜನ ಕಾಲದಲ್ಲಿ ಜನಸಾಮಾನ್ಯರೂ ಸಾಕಷ್ಟು ವಿದ್ಯಾವಂತರಾಗಿದ್ದರು. ಭೋಜರಾಜನ ದರ್ಶನಾಪೇಕ್ಷಿಯಾದ ಆ ಸ್ತ್ರೀಯು ತಾನು ವಿದ್ಯಾವಂತಳೆಂದು ನಿವೇದಿಸಿಕೊಂಡಳು. ಅವಳನ್ನು ಪರೀಕ್ಷಿಸಲು ಭೋಜರಾಜನು ಕೆಳಗಿನ ಶ್ಲೋಕಪಾದವೊಂದನ್ನು ಹೇಳಿದನು: "ಕಂವಣ ಪಿಯಾವವೂಂ ಖೀರು?" (ಹಾಲನ್ನು ಯಾವುದಕ್ಕೆ ಕುಡಿಸಲಿ?) ಇದನ್ನು ಹೇಳಿ, ಆ ಇಡೀ ಶ್ಲೋಕವಾವುದೆಂದು ಆ ಸ್ತ್ರೀಯನ್ನು ಪ್ರಶ್ನಿಸಿದನು. ಆಕೆಯು ತಟ್ಟನೆ ಆ ಶ್ಲೋಕವನ್ನು ಉಚ್ಚರಿಸಿದಳು:

ಜಇಯುಹ ರಾವಣ ಜಾಇಯುವು
ದಹಂ ಮುಹಂ ಇಕ್ಕ ಶರೀರು ॥

ಜನನೀ ವಿಜಂಭಿ! ಚಿಂತವಇ
ಕಂವಣ ಪಿಯಾವವೂಂ ಖೀರು ||

ಅರ್ಥ: ಹತ್ತು ಮುಖಗಳು ಮತ್ತು ಒಂದು ತಲೆಯಿರುವ ರಾವಣ ಹುಟ್ಟಿದಾಗ ಅವನ ತಾಯಿ ಗಾಬರಿಗೊಂಡು ಹೀಗೆ ಯೋಚಿಸಿದಳು: "ಯಾವ ಬಾಯಿಯಿಂದ ಹಾಲು ಕುಡಿಸಲಿ?"

ರಾಜನು ಇದನ್ನು ಕೇಳಿ, ಸಂತಸಗೊಂಡು ಅವಳಿಗೆ ಯೋಗ್ಯ ಬಹುಮಾನವಿತ್ತು ಗೌರವಿಸಿದನು;

o o o o o

೩

ಒಮ್ಮೆ ಒಬ್ಬ ಬಡ ಬ್ರಾಹ್ಮಣನು ಭೋಜರಾಜನಲ್ಲಿಗೆ ಬಂದು ಶ್ಲೋಕ ರೂಪದಲ್ಲಿ ಪ್ರಶ್ನಿಸಿದ: "ನನ್ನ ತಾಯಿಗೆ ನನ್ನೊಡನಾಗಲಿ, ನನ್ನ ಹೆಂಡತಿಯೊಡನಾಗಲಿ ತೃಪ್ತಿಯಿಲ್ಲ. ನನ್ನ ಪತ್ನಿಗೂ ಅಂತೆಯೇ. ಅವಳು ನನ್ನನ್ನೂ ನನ್ನ ಮಾತೆಯನ್ನೂ ಕಂಡರೆ ಉರಿದುಬೀಳುತ್ತಾಳೆ. ನಾನೂ ಅಷ್ಟೆ. ನನ್ನ ಪತ್ನಿ ಮತ್ತು ತಾಯಿ ಇಬ್ಬರೂ ನನಗೆ ಸರಿಬೀಳುವುದಿಲ್ಲ. ನಮ್ಮಲ್ಲಿ ಯಾರು ತಪ್ಪುಮಾಡುತ್ತಿದ್ದಾರೆ?"

ಭೋಜರಾಜನು ಒಡನೆಯೇ ಆ ಬ್ರಾಹ್ಮಣನಿಗೆ ಹತ್ತುಸಾವಿರ ವರಹಗಳನ್ನು ತರಿಸಿಕೊಟ್ಟು, "ಸ್ವಾಮಿ, ನಿಮ್ಮ ಬಡತನವೇ ನಿಮ್ಮೆಲ್ಲರ ಆಂತರಿಕ ಅತೃಪ್ತಿಗೆ ಕಾರಣವಾಗಿತ್ತು. ಇನ್ನು ನಿಮ್ಮಲ್ಲಿ ಜಗಳವಾಗಲಾರದು" ಎಂದು ಹೇಳಿ, ಅವನನ್ನು ಕಳುಹಿಸಿಕೊಟ್ಟನು.

o o o o o

೪

ಭೋಜರಾಜನು ಅದೇ ತಾನೇ ಬೇಟೆಯಿಂದ ಹಿಂತಿರುಗುತ್ತಿದ್ದನು. ಅವನು ಕುಳಿತಿದ್ದ ಕುದುರೆಯು ಹೊಲವೊಂದರ ಪಕ್ಕದಿಂದ ಹಾದು ಹೋಗುತ್ತಿತ್ತು. ಆಗ ರಾಜನಿಗೆ ಒಂದು ದೃಶ್ಯವು ಕಂಡಿತು. ಅದೇನೆಂದರೆ ಕೊಯ್ದು ಮುಗಿದ ಹೊಲದಲ್ಲಿ ಭತ್ತವನ್ನು ಹುಡುಕುತ್ತಾ ಒಬ್ಬ ವ್ಯಕ್ತಿಯು ಸುಳಿಯುತ್ತಿದ್ದನು.

ಕೂಡಲೇ ಭೋಜರಾಜನು "ತನ್ನ ಹೊಟ್ಟೆಯನ್ನು ತುಂಬಿಸಲಾರದ ಮನುಷ್ಯನಿಂದೇನು ಲಾಭ?" ಎಂದು ಕೇಳಿದ.

ಆ ವ್ಯಕ್ತಿಯು ಈ ಮಾತನ್ನು ಕೇಳಿ ಹೀಗೆ ಉತ್ತರಿಸಿದ: "ದೇವರು ಸಕಲ ಸಂಪದವನ್ನು ಕೊಟ್ಟಿದ್ದರೂ, ಒಬ್ಬನು ಇನ್ನೊಬ್ಬರಿಗೆ ದಾನವನ್ನು ಕೊಡುವುದಿಲ್ಲವೆಂದರೆ ಅಂತಹ ಜನರಿಂದೇನು ಲಾಭ?"

ರಾಜನು ತುಸು ಧ್ವನಿಯೆತ್ತರಿಸಿ ನುಡಿದ: "ಎಲಾ ಭೂದೇವಿ, ಭಿಕ್ಷೆ ಬೇಡಿ ದಿನಗಳೆಯುವವರಿಗೆ ನೀನು ಜನ್ಮಗೊಡಬೇಡ. ಅವರು ನಿನಗೆ ಹೊರೆಯಾಗಿದ್ದಾರೆ."

ಆ ವ್ಯಕ್ತಿಯು ತಟ್ಟನೆ, "ಭೂಮಾತೆ, ಬಡವರ ಕಡೆಗೆ ತಿರುಗಿಯೂ ನೋಡದ ಜಿಪುಣರಿಗೆ ಏಕೆ ಜನ್ಮ ನೀಡುವೆ? ಅವರು ನಿನಗೆ ಹೊರೆಯಾಗು ವರು" ಎಂದು ಉತ್ತರಿಸಿದನು.

ರಾಜನು ಕೂಡಲೇ ಕುದುರೆಯಿಂದಿಳಿದು ಆ ವ್ಯಕ್ತಿಯು ಯಾರೆಂದ್ದು ವಿಚಾರಿಸಿದನು. ಅವನೊಬ್ಬ ಕವಿಯೆಂದು ತಿಳಿದುಬಂತು. ಕವಿಕುಲ ಖಗಸಂಚಯಕ್ಕೆ ಮಾಮರವಾಗಿದ್ದ ಭೋಜರಾಜನು ಬಳಿಕ ಆ ಕವಿಗೆ ಆಶ್ರಯ ನೀಡಿದನೆಂದು ಬೇರೆ ಹೇಳಬೇಕಾಗಿಲ್ಲವಷ್ಟೆ!

o o o o o

೫

ಒಂದು ದಿನ, ಭೋಜರಾಜನ ಒಡ್ಡೋಲಗಕ್ಕೆ ಭಿಕ್ಷಾಕಪಾಲವನ್ನು ಕೈಯಲ್ಲಿ ಹಿಡಿದುಕೊಂಡು ಹೆಚ್ಚುಕಡಿಮೆ ನಗ್ನಾವಸ್ಥೆಯಲ್ಲಿದ್ದ ಭಿಕ್ಷುಕ ನೋರ್ವನು ಪ್ರವೇಶಿಸಿದನು. ನೆರೆದ ಜನರು ಆತನನ್ನು ನೋಡಿ ಗಹ ಗಹಿಸಿ ನಗಲಾರಂಭಿಸಿದರು! ಆತನನ್ನು ನೋಡಿ ಭೋಜರಾಜನೂ ಮುಗುಳ್ನಕ್ಕು, "ನೀನೆಲ್ಲಿಂದ ಬರುತ್ತಿರುವೆ?" ಎಂದು ಪ್ರಶ್ನಿಸಿದನು.

"ಕೈಲಾಸದಿಂದ" ಎಂದನು ಆ ಭಿಕ್ಷುಕ!

ರಾಜನು ಕೇಳಿದನು: "ಹೇಳು, ಪರಮಪೂಜ್ಯ ಪರಮೇಶ್ವರನು ಸುಖದಿಂದಿರುವನೇ?"

ಭಿಕ್ಷುಕನು ನುಡಿದ: "ಈ ಪ್ರಶ್ನೆಗೆ ಅರ್ಥವಿಲ್ಲ. ಏಕೆಂದರೆ ಅವ ನೆಂದೋ ಇಲ್ಲವಾಗಿದ್ದಾನೆ."

ಈ ಮಾತನ್ನು ಕೇಳಿ ಸಭಿಕರು ಒಬ್ಬರ ಮುಖವನ್ನೊಬ್ಬರು ನೋಡ ತೊಡಗಿದರು. ಶಿವೋಪಾಸಕನಾದ ಭೋಜರಾಜನು ಈ ಮಾತಿನಿಂದ ಸಿಟ್ಟುಗೊಳ್ಳುವನೆಂದು ಅವರು ಭಾವಿಸಿದ್ದರು. ಆದರೆ, ಭೋಜರಾಜನು ತುಸುವಾದರೂ ಕೋಪವನ್ನು ಪ್ರದರ್ಶಿಸದೆ, "ಶಿವನು ಇಲ್ಲವಾಗಿದ್ದಾನೆಯೇ? ನಮಗೆ ತಿಳಿಯಲೇ ಇಲ್ಲ" ಎಂದು ಉದ್ಗರಿಸಿದನು.

"ಸಾವಿರಾರು ವರ್ಷಗಳ ಹಿಂದೆಯೇ ಅವನು ನಶ್ವರವಾಗಲು ಆರಂಭಿಸಿದ್ದನು. ಈಗಂತೂ ಪೂರ್ತಿ ನಶ್ವರನಾಗಿದ್ದಾನೆ."

"ಹೇಗೆ?" ಭೋಜರಾಜನು ಉದ್ವೇಗದಿಂದ ಪ್ರಶ್ನಿಸಿದನು.

ಭಿಕ್ಷುಕನು ಉತ್ತರಿಸಿದನು: "ಮಹಾರಾಜಾ, ಹರಿ-ಹರರೆಂದರೆ ಒಬ್ಬರೇ. ಆದಕಾರಣ ಶಿವನ ಅರ್ಧ ಅಂಶವನ್ನು ಹರಿಯು ಆಕ್ರಮಿಸಿಕೊಂಡನು. 'ಅರ್ಧನಾರೀಶ್ವರ'ನೆಂದು ಅವನು ಪ್ರಖ್ಯಾತನಾಗಿದ್ದಾನೆ. ಆದರಿಂದ ಅವನ ಉಳಿದರ್ಧ ಭಾಗವು ಪಾರ್ವತಿಯದಾಯಿತು. ಚಂದ್ರನನ್ನು ಆಕಾಶವು ತೆಗೆದುಕೊಂಡಿತು, ಮಹಾಶೇಷನನ್ನು ಪಾತಾಳವು ಪಡೆಯಿತು. ಗಂಗೆ ಭೂಮಿಗಿಳಿದಳು. ಶಿವನ ಗುಣಗಳಾದ ದಾನಶೀಲತೆ, ವೀರತೆ ಮತ್ತು ಔದಾರ್ಯಗಳು ತಮ್ಮ ಪಾಲಿಗೆ ಬಂದುವು. ಕೊನೆಯದಾಗಿ ಉಳಿದ ಆತನ ಭಿಕ್ಷಾಟನಾವೃತ್ತಿ ನನಗೆ ದೊರೆಯಿತು,"

ಈ ಸ್ವಾರಸ್ಯವನ್ನು ಕೇಳಿ ಭೋಜರಾಜನು ಸಂತೋಷಗೊಂಡ. ಆ ಭಿಕ್ಷುಕನಿಗೆ ತಕ್ಕಷ್ಟು ಧನವನ್ನು ಕೊಟ್ಟು, ಮರ್ಯಾದೆಯಾಗಿ ಬೀಳ್ಕೊಂಡು ಕಳುಹಿಸಿದನು.

o o o o o

೨

ಗುಜರಾಥದ ರಾಜದೂತನೊಬ್ಬನು ಭೋಜರಾಜನ ಆಸ್ಥಾನಕ್ಕೆ ಬಂದನು. ಅವನು ಬುದ್ಧಿವಂತನಾಗಿದ್ದರೂ ಕುರೂಪಿಯಾಗಿದ್ದ. ಅವನನ್ನು ಕಂಡು ಭೋಜರಾಜನಿಗೆ ನಗುಬಂತು. ಹಾಸ್ಯಪ್ರವೃತ್ತಿಯವನಾದ ರಾಜನು ಅವನನ್ನು ಪ್ರಶ್ನಿಸಿದ: "ನಿಮ್ಮಂತಹ ಇನ್ನೆಷ್ಟು ಮಂದಿ ರಾಜ-ದೂತರು ನಿಮ್ಮರಸನ ಆಸ್ಥಾನದಲ್ಲಿರುವರು?"

ಆ ದೂತನು ಚತುರನಾಗಿದ್ದುದರಿಂದ ಒಡನೆಯೇ, "ಮಹಾರಾಜಾ ನಮ್ಮ ಮಹಾರಾಜರ ಬಳಿ ಉತ್ತಮ, ಮಧ್ಯಮ ಮತ್ತು ಅಧಮ ಎಂಬ ಮೂರು ಬಗೆಯ ದೂತರಿದ್ದಾರೆ. ರಾಜನನ್ನು ಹೊಂದಿಕೊಂಡು ದೂತನನ್ನು ಕಳುಹಿಸಲಾಗುತ್ತದೆ. ಆದುದರಿಂದ ತಮ್ಮ ಯೋಗ್ಯತೆಯ ಅನುಸಾರ ನನ್ನ ಗುಣವೆಂಬುದನ್ನು ತಿಳಿಯಿರಿ. ತಾವು ತಮ್ಮನ್ನು ಹೇಗೆ ತಿಳಿಯುವಿರೋ ಅಂತೇ ನಾನೆಂದು ಭಾವಿಸಿರಿ" ಎಂದ.

ಈ ಉತ್ತರವನ್ನು ಕೇಳಿ ಭೋಜರಾಜನು ಸಂತಸಪಟ್ಟು ಆತನ ಬುದ್ಧಿಮತ್ತೆಯನ್ನು ಪ್ರಶಂಸಿಸಿದನು.

೦ ೦ ೦ ೦

೭

ಭೋಜರಾಜನು ಒಂದು ಸುಂದರವಾದ ಗಿಳಿಯನ್ನು ಸಾಕಿದ್ದನು. ಅದಕ್ಕೆ 'ಒಂದು ವಸ್ತು ಒಳ್ಳೆಯದಲ್ಲ' ಎಂಬ ಮಾತನ್ನು ಕಲಿಸಿದ್ದನು.

ಒಂದು ದಿನ ರಾಜನು ಅದನ್ನು ತೆಗೆದುಕೊಂಡು ಸಭೆಗೆ ಹೋದನು. ರಾಜನು ಸಂಜ್ಞೆಮಾಡಿದೊಡನೆಯೇ ಆ ಗಿಳಿಯು ಪುನಃ ಪುನಃ "ಒಂದು ವಸ್ತು ಒಳ್ಳೆಯದಲ್ಲ" ಎಂದು ಹೇಳತೊಡಗಿತು. ಆ ಸಭೆಯಲ್ಲಿ ಮಹಾಮಹಾ ವಿದ್ವಾಂಸರಿದ್ದರೂ ಒಬ್ಬರೂ ಆ ಪ್ರಶ್ನೆಗೆ ಉಸಿರೆತ್ತದೆ ಕುಳಿತಿದ್ದರು.

ಭೋಜರಾಜನು, "ಈ ಗಿಳಿ ಏನು ಹೇಳುತ್ತಿದೆ? ಅದರ ಮಾತಿಗೆ ನೀವೇಕೆ ಉತ್ತರಕೊಡುವುದಿಲ್ಲ?" ಎಂದು ಪ್ರಶ್ನಿಸಿದನು.

ವಿದ್ವಾಂಸರು ಬೇರೆ ಬೇರೆ ಸಮಾಧಾನ ನೀಡಿದರು. ಆದರೆ ರಾಜನಿಗೆ ಅವುಗಳಲ್ಲಿ ಒಂದೂ ಹಿಡಿಸಲಿಲ್ಲ. ಅವನು ತನ್ನ ವಿದ್ವಾಂಸರ ಅಸಮರ್ಥತೆಯನ್ನು ಕಂಡು ಕೋಪಗೊಂಡು, "ನೀವು ಇಷ್ಟು ಕೈಲಾಗದವರೇ? ಇನ್ನು ಒಂದು ತಿಂಗಳೊಳಗಾಗಿ ನೀವು ಈ ಪ್ರಶ್ನೆಗೆ ಯೋಗ್ಯವಾದ ಸಮಾಧಾನವನ್ನು ತರದಿದ್ದರೆ ನಿಮ್ಮೆಲ್ಲರನ್ನೂ ನನ್ನ ಆಸ್ಥಾನದಿಂದ ಹೊರಗಟ್ಟುವೆ" ಎಂದು ಅಬ್ಬರಿಸಿದನು.

ಅಂದಿನ ಸಭೆಯು ಮುಕ್ತಾಯಗೊಂಡಿತು. ಪಂಡಿತರು ಜೋಲು ಮೋರೆಹಾಕಿಕೊಂಡು ರಾಜಭವನದಿಂದ ಹೊರಬೀಳತೊಡಗಿದರು.

ಆ ವಿದ್ವಾಂಸರ ನಡುವೆ 'ವರರುಚಿ' ಎಂಬ ಹೆಸರಿನ ಶ್ರೇಷ್ಠ ವಿದ್ವಾಂಸನೊಬ್ಬನಿದ್ದನು. ತನ್ನ ನೌಕರಿಯು ಕಳೆದುಹೋಗುವುದೆಂಬ

ಭಯದಿಂದ ಅವನು ತಳಮಳಿಸಿದನು. ಅವನು ಕಳವಳದಿಂದ ತನ್ನ ಮನೆಯ ದಾರಿಯಲ್ಲಿ ಸಾಗುತ್ತಿರಲು ಆತನಿಗೆ ದನ ಮೇಯಿಸುವವ ನೊಬ್ಬನು ಸಿಕ್ಕಿದನು. ಅವನು ವರರುಚಿಯ ಚಿಂತೆಯನ್ನು ಗ್ರಹಿಸಿ, ಆತನೊಡನೆ ಎಲ್ಲವನ್ನೂ ಕೇಳಿ ತಿಳಿದುಕೊಂಡು, "ಸ್ವಾಮಿ, ಮಹಾರಾಜರ ಪ್ರಶ್ನೆಗೆ ನಾನು ಉತ್ತರಕೊಡುವೆನು. ತಾವು ಅದಕ್ಕಾಗಿ ನನಗೆ ತುಸು ಸಹಾಯಮಾಡಬೇಕು. ಅದೇನೆಂದರೆ ತಾವು ನನ್ನ ಚಪ್ಪಲಿಗಳನ್ನು ತಲೆಯಲ್ಲಿ ಹೊತ್ತುಕೊಂಡು ಮಹಾರಾಜನ ಆಸ್ಥಾನಕ್ಕೆ ನನ್ನೊಂದಿಗೆ ಬರಬೇಕು" ಎಂದನು. ಕೆಲಸದ ಮೇಲೆ ತೀರಾ ಆಶೆಯಿದ್ದುದರಿಂದ ವರರುಚಿಯು ಅದಕ್ಕೊಪ್ಪಿಕೊಂಡನು.

ಇಬ್ಬರೂ ಭೋಜರಾಜನನ್ನು ಸಂದರ್ಶಿಸಿದರು. ತಲೆಯ ಮೇಲೆ ಗೋವಳನ ಪಾದರಕ್ಷೆಗಳನ್ನು ಹೊತ್ತಿದ್ದ ವರರುಚಿಯು ಭೋಜರಾಜ ನೊಡನೆ, "ಮಹಾರಾಜಾ ನನ್ನ ಪರವಾಗಿ ಈತನು ತಮ್ಮ ಪ್ರಶ್ನೆಗುತ್ತರ ಕೊಡುವನು" ಎಂದನು. ಭೋಜರಾಜನು ಒಲ್ಲೆನೆನ್ನಲಿಲ್ಲ.

ಕೂಡಲೇ ಗೋರಕ್ಷಕನು ಹೇಳಿದನು. "ಮಹಾರಾಜಾ, ಪ್ರಪಂಚ ದಲ್ಲಿ ಒಂದು ವಸ್ತು ಒಳ್ಳೆಯದಲ್ಲ. ಅದಾವುದೆಂದರೆ ದುರಾಶೆ. ದುರಾ ಶೆಯೇ ಮಾನವನನ್ನು ಎಂಥಾ ಕಾರ್ಯಕ್ಕೂ ಪ್ರೇರೇಪಿಸುವುದು. ಉದಾ ಹರಣೆಗಾಗಿ ತಮ್ಮ ಆಸ್ಥಾನದ ಶ್ರೇಷ್ಠ ಪಂಡಿತರಾದ ವರರುಚಿಯವರು ಕೆಳದರ್ಜೆಯ ನನ್ನಂಥ ಗೊಲ್ಲನ ಚಪ್ಪಲಿಗಳನ್ನು ತಲೆಯ ಮೇಲೆ ಹೊತ್ತುಕೊಂಡುದು ಎಂಥ ನೀಚಕಾರ್ಯ? ಅಲ್ಲವೇ ಮಹಾಪ್ರಭೂ?"

ಭೋಜರಾಜನಿಗೆ ಈ ಉತ್ತರದಿಂದ ತೃಪ್ತಿಯಾಯಿತು. ಗೋವಳ ನಿಗೆ ಬಹುಮಾನವೂ ಸಿಕ್ಕಿತು.

ೲ ೲ ೲ ೲ

೮

ಒಂದು ಸಂದರ್ಭದಲ್ಲಿ ಭೋಜರಾಜನು "ನಮ್ಮ ಸಭೆಯಲ್ಲಿರುವ ವಿದ್ವಾಂಸರು ಗುಜರಾಥದ ಪ್ರಭು ಭೀಮದೇವನ ಆಸ್ಥಾನ ವಿದ್ವಾಂಸರಿ ಗಿಂತಲೂ ಶ್ರೇಷ್ಠರು" ಎಂದು ಹೇಳಿದನು. ಇದನ್ನು ಪಕ್ಕದಲ್ಲಿದ್ದ ಗುಜರಾಥದ ರಾಜದೂತನು ಕೇಳಿ ಕೂಡಲೇ ಹೇಳಿದ: "ಮಹಾಪ್ರಭೂ,

ತಾವು ತಪ್ಪು ಅಭಿಪ್ರಾಯವನ್ನು ಹೊಂದಿದ್ದೀರಿ. ನಿಮ್ಮ ಪಂಡಿತರಿಗಿಂತಲೂ ನಮ್ಮ ಗುಜರಾಥದ ಗೋವಳರ ಹೆಚ್ಚು ಬುದ್ಧಿಶಾಲಿಗಳಾಗಿದ್ದಾರೆ. ನಮ್ಮ ರಾಜನ ಆಸ್ಥಾನದ ನರ್ತಕಿಯರು ಕೂಡಾ ಪ್ರತ್ಯುತ್ಪನ್ನಮತಿಗಳಾಗಿದ್ದಾರೆ"

"ಹಾಗಿದ್ದರೆ ಅವರನ್ನು ಪರೀಕ್ಷಿಸಬೇಕಾಗಿದೆ. ಬೇಗನೇ ಬರಮಾಡು." ಎಂದು ಭೋಜರಾಜನು ಆಜ್ಞಾಪಿಸಿದ.

ರಾಜದೂತನು ಗುಜರಾಥದ ಒಡೆಯ ಭೀಮದೇವನಿಗೆ ಎಲ್ಲಾ ವಿಷಯಗಳನ್ನು ತಿಳಿಸಿದ. ಕೂಡಲೇ ಭೀಮದೇವನು ತನ್ನ ಆಸ್ಥಾನದ ಬುದ್ಧಿಶಾಲಿಯಾದ ಪಂಡಿತನೊಬ್ಬನನ್ನು ದನ ಮೇಯಿಸುವವನ ರೂಪದಲ್ಲಿ ಚತುರೆ ನರ್ತಕಿಯೋರ್ವಳ ಸಹಿತ ಭೋಜರಾಜನ ಆಸ್ಥಾನಕ್ಕೆ ಕಳುಹಿಸಿದನು.

ಅವರಿಬ್ಬರೂ ಭೋಜರಾಜನ ಆಸ್ಥಾನವನ್ನು ತಲಪಿದರು. ರಾಜನು ಮೊದಲು ದನ ಮೇಯಿಸುವವನೊಡನೆ, "ಹೇಳು, ನನ್ನ ಕುತ್ತಿಗೆಯಲ್ಲಿ ಈ ಹಾರವೇಕೆ ಇದೆ?" ಎಂದು ಕೇಳಿದನು.

ಆ ಕೂಡಲೇ ಅವನು ಉತ್ತರಿಸಿದನು: "ಮಹಾರಾಜಾ, ತಮ್ಮ ಹೃದಯದಲ್ಲಿ ಲಕ್ಷ್ಮಿ ನೆಲಸಿದ್ದಾಳೆ. ತಮ್ಮ ಮುಖದಲ್ಲಿ ಸರಸ್ವತಿಯು ಇದ್ದಾಳೆ. ಅವರಿಬ್ಬರ ನಡುವೆ ಕಲಹವು ಉಂಟಾಗದಂತೆ ತಾವು ಈ ಕಂಠಹಾರವನ್ನು ತಡೆಯಾಗಿ ಮಾಡಿದ್ದೀರಿ."

ಭೋಜರಾಜನು ಪ್ರಸನ್ನನಾಗಿ ಅವನಿಗೆ ಬಹುಮಾನವನ್ನಿತ್ತು ಆ ಬಳಿಕ ನರ್ತಕಿಯನ್ನು ನರ್ತಿಸುವಂತೆ ಹೇಳಿದನು. ಆಕೆಯು ನರ್ತಿಸಲಾರಂಭಿಸಿದಳು. ನರ್ತನದ ನಡುವೆ ರಾಜನು ಅವಳನ್ನು ಥಟ್ಟನೆ ಪ್ರಶ್ನಿಸಿದನು: "ಏನು ಮಾಡುತ್ತಿವೆ?"....ಆಕೆಯು ಕೂಡಲೇ "ಕೇಳುತ್ತಿವೆ" ಎಂದುತ್ತರಿಸಿದಳು. ಕೂಡಲೇ ಭೋಜರಾಜನು ಆಕೆಗೆ ಮೂರು ಲಕ್ಷ ವರಹಗಳನ್ನು ಕೊಡುವಂತೆ ಕೋಶಾಧಿಕಾರಿಗೆ ಆಜ್ಞಾಪಿಸಿದನು.

ಭೋಜರಾಜನ ಆಸ್ಥಾನದ ಪಂಡಿತರಿಗೆ ರಾಜ-ನರ್ತಕಿಯರ ಈ ಪ್ರಶ್ನೋತ್ತರಗಳು ಅರ್ಥವಾಗಲಿಲ್ಲ. ಎಂತಲೇ ಅವರು ಭೋಜರಾಜನೊಡನೆ ಈ ಕುರಿತು ಪ್ರಶ್ನಿಸಿದರು. ರಾಜನು ಹೇಳಿದನು: "ಇವಳು

ನರ್ತಿಸುತ್ತಿದ್ದಾಗ ಇವಳ ಕಮಲನಯನಗಳು ತುದಿಕಿವಿಗಳ ತನಕ ವಿಸ್ತರಿಸುತ್ತಿದ್ದವು. ಇದನ್ನು ಗಮನಿಸಿ ನಾನು 'ನಿನ್ನ ಕಣ್ಣುಗಳು ಏನು ಮಾಡುತ್ತಿವೆ?' ಎಂಬ ಅರ್ಥದಲ್ಲಿ 'ಏನು ಮಾಡುತ್ತಿವೆ?' ಎಂದು ಪ್ರಶ್ನಿಸಿದೆನು. ಅವಳು ಅದಕ್ಕೆ ಏನು ಉತ್ತರ ಕೊಟ್ಟಳೋ ಅವಳನ್ನೇ ಕೇಳಿ ತಿಳಿಯಿರಿ" ಎಂದನು.

ವಿದ್ವಾಂಸರು ಅವಳನ್ನು ಕೇಳಿದಾಗ ಅವಳು ನುಡಿದಳು: "ಮಹಾರಾಜರ ಪ್ರಶ್ನೆಗೆ ನಾನು 'ಕೇಳುತ್ತಿವೆ' ಎಂದಷ್ಟೆ ಉತ್ತರಕೊಟ್ಟದ್ದೆ. ಅಂದರೆ ನನ್ನ ಕಣ್ಣುಗಳು ಕಿವಿಯ ವರೆಗೂ ವಿಸ್ತರಿಸಿ 'ನೀವು ಯಾವ ರಾಜನ ಯಶಸ್ಸನ್ನು ಕೇಳಿದ್ದೀರೋ ಅದೇ ರಾಜನನ್ನು ತಾನೇ ನಾವು ಕಾಣುತ್ತಿರುವುದು?' ಎಂದು ಕಿವಿಗಳೊಡನೆ ಪ್ರಶ್ನಿಸಿದುವು. ಅದಕ್ಕೆ ನನ್ನ ಕಿವಿಗಳು "ನೀವು ಯಾರನ್ನು ನೋಡುತ್ತಿದ್ದೀರೋ, ನಾವು ಯಾರ ಯಶಸ್ಸನ್ನು ಕೇಳಿದ್ದೇವೆಯೋ ಅವನೇ ಈ ಭೋಜರಾಜನು" ಎಂದುತ್ತರಿಸಿದುವು. ಕಣ್ಣುಗಳೂ ಕಿವಿಗಳೊಡನೆ ಪ್ರಶ್ನೆಯನ್ನು 'ಕೇಳುತ್ತಿದ್ದುವು' ಎಂಬುದಾಗಿ ಉತ್ತರಿಸಿದೆ" ಎಂದಳು.

ಇದನ್ನು ಕೇಳಿ ಇಡೀ ಸಭೆಯು ಆಶ್ಚರ್ಯಪಟ್ಟಿತು.

o o o o

೬

ಒಮ್ಮೆ ಒಬ್ಬ ಕುಂಬಾರಗಿತ್ತಿಯು ಭೋಜರಾಜನ ದರ್ಶನಪಡೆದಳು. ರಾಜ ಅವಳನ್ನು ವಿಚಾರಿಸಿದಾಗ ಆಕೆ ಹೇಳಿದಳು: "ನನ್ನ ಯಜಮಾನರು ಪಾತ್ರೆಗಳನ್ನು ಮಾಡುತ್ತಾರೆ. ಅದಕ್ಕೋಸ್ಕರ ಅವರು ಮಣ್ಣು ಅಗೆಯುತ್ತಿದ್ದಾಗ ಅವರಿಗೆ ರತ್ನಗಳಿಂದ ತುಂಬಿದ ಕೊಡವೊಂದು ಸಿಕ್ಕಿತು. ಕೊಡವು ನಮ್ಮ ಮನೆಯಲ್ಲೇ ಇದೆ. ಯಾವುದಕ್ಕೂ ತಮ್ಮ ಅಪ್ಪಣೆಯನ್ನು ಕೇಳಿಕೊಂಡು ಬರಲು ನನ್ನನ್ನು ಕಳುಹಿಸಿದ್ದಾರೆ."

ಅವರ ಪ್ರಾಮಾಣಿಕತ್ವವನ್ನು ಕಂಡು ರಾಜನಿಗೆ ಬಹಳ ಸಂತೋಷವಾಯಿತು. ಕುಂಬಾರನು ಆ ಕೊಡವನ್ನು ಅರಮನೆಗೆ ತರಬೇಕೆಂದು ಆಜ್ಞಾಪಿಸಿದನು. ಕುಂಬಾರಗಿತ್ತಿಯು ಮರಳಿದಳು.

ತುಸು ಹೊತ್ತಿನಲ್ಲಿಯೇ ಕುಂಬಾರನು ಕೊಡಸಮೇತ ಭೋಜರಾಜನ ಸನ್ನಿಧಿಗೆ ಹಾಜರಾದನು. ರಾಜನು ಕೊಡದ ಬಾಯಿಯನ್ನು ತೆಗೆದು ಅದರಲ್ಲಿ ಮಿನುಗುತ್ತಿರುವ ರತ್ನಗಳನ್ನು ಕಂಡನು.

"ಇವುಗಳೇನೆಂದು ನಿನ್ನ ಅಭಿಪ್ರಾಯ?" ಭೋಜನು ಕುಂಬಾರನನ್ನು ಪ್ರಶ್ನಿಸಿದನು. ಕುಂಬಾರನು, "ಇವುಗಳು ಆಕಾಶದ ನಕ್ಷತ್ರಗಳೆಂದು ನನ್ನ ಅಭಿಪ್ರಾಯ ಮಹಾಪ್ರಭೋ" ಎಂದು ಚತುರತೆಯಿಂದಲೇ ಉತ್ತರಿಸಿದನು.

"ನಕ್ಷತ್ರಗಳೇ? ಅವು ಭೂಮಿಗೆ ಏಕೆ ಬಂದುವು?" ರಾಜನು ನಕ್ಕು ಪ್ರಶ್ನಿಸಿದನು.

ಕುಂಬಾರನೆಂದನು: "ಮಹಾರಾಜಾ, ಆಕಾಶದ 'ಚಂದ್ರ'ನು ಭೂಮಿಯಲ್ಲಿದ್ದಾನೆಂದ ಬಳಿಕ ನಕ್ಷತ್ರಗಳೇಕೆ ಅಲ್ಲಿರಬೇಕು?"

ಭೋಜರಾಜನನ್ನೇ 'ಚಂದ್ರ'ನೆಂದು ಅವನು ಅವ್ಯಕ್ತ ರೀತಿಯಲ್ಲಿ ಸೂಚಿಸಿದ್ದ. ಇದನ್ನು ಅರಿತ ಭೋಜರಾಜನು ಸಂತಸಪಟ್ಟನು. ಪ್ರಾಮಾಣಿಕನೂ ಬುದ್ಧಿಶಾಲಿಯೂ ಆದ ಆ ಕುಂಬಾರನಿಗೇ ಆ ರತ್ನಗಳು ತುಂಬಿದ ಕೊಡವನ್ನಿತ್ತು ಕಳುಹಿಸಿದನು.

o o o o

೧೦

ಒಮ್ಮೆ ಭೋಜರಾಜನು ಒಬ್ಬ ಸಾಮಾನ್ಯ ಮನುಷ್ಯನ ಉಡುಪನ್ನು ತೊಟ್ಟು ನಗರಸಂಚಾರವನ್ನು ಮಾಡುತ್ತಿದ್ದನು. ಆಗ ಅವನಿಗೆದುರಾಗಿ ಚರ್ಮದ ಕಮಂಡಲವನ್ನು ಹಿಡಿದ ಸಾಧುವೊಬ್ಬನು ಬಂದನು.

ಭೋಜರಾಜನು ಆತನನ್ನು ತಡೆದು, "ನೀನು ಬ್ರಾಹ್ಮಣನಲ್ಲವೇ?" ಎಂದು ಪ್ರಶ್ನಿಸಿದನು. ಅವನು ಹೌದೆಂದನು. ಕೂಡಲೇ ಭೋಜರಾಜನು "ನಿನಗೆ ಚರ್ಮದ ಕಮಂಡಲುವನ್ನು ಹಿಡಿಯಲು ನಾಚಿಗೆಯಾಗುವುದಿಲ್ಲವೇ?" ಎಂದು ಪ್ರಶ್ನಿಸಿದನು.

ಆ ಸಾಧುವು ರಾಜನನ್ನೇ ಕೇಳಿದ: "ಮತ್ತಾವುದರ ಕಮಂಡಲವನ್ನು ಹಿಡಿಯಲಿ?"

"ಕಬ್ಬಿಣ ಅಥವಾ ತಾಮ್ರದ್ದು" ಭೋಜರಾಜನೆಂದನು.

ಆ ಸನ್ಯಾಸಿಯು ಒಡನೆಯೇ, "ನಿನಗೆ ತಲೆ ಕೆಟ್ಟಿದೆಯೇ? ಭೋಜರಾಜನ ರಾಜ್ಯದಲ್ಲಿ ಕಬ್ಬಿಣ ಮತ್ತು ತಾಮ್ರವು ಈಗ ಸಿಕ್ಕಲಾರದು" ಎಂದು ಹೇಳಿದನು.

"ಯಾಕೆ ಸಿಗಲಾರದು." ಎಂದು ಕೇಳಿದನು ಭೋಜರಾಜ.

ಆ ತಪಸ್ವಿಯು ಉತ್ತರಿಸಿದನು. "ಮಹಾರಾಜನು ಶತ್ರುಗಳ ಬಂಧಿಸುವುದಕ್ಕಾಗಿ ಸಂಕೋಲೆಗಳನ್ನು ಮಾಡಿಸಿದನು. ದಾನಕೊಡುವುದಕ್ಕಾಗಿ ದಾನಪಾತ್ರೆಗಳನ್ನು ಮಾಡಿಸಿದನು. ಹೀಗಾಗಿ ಕಬ್ಬಿಣ ತಾಮ್ರಗಳು ಈಗ ದುರ್ಲಭವಾಗಿವೆ. ಆದುದರಿಂದ ನಾನು ಚರ್ಮದ ಕಮಂಡಲುವನ್ನು ಹಿಡಿಯಬೇಕಾಗಿದೆ."

ಆ ಚತುರನಾದ ತಪಸ್ವಿಯು ಭೋಜರಾಜನು ಸಾಮಾನ್ಯವಾದ ಉಡುಪಿನಲ್ಲಿದ್ದರೂ ಆತನನ್ನು ಗುರುತಿಸಿದ್ದನು. ಭೋಜರಾಜನು ಆ ಜಾಣ್ಮೆಗೆ ಮೆಚ್ಚಿ, ಆತನಿಗೆ ಒಂದು ಚಿನ್ನದ ಕಮಂಡಲುವನ್ನು ಮಾ ಕೊಟ್ಟನು.

ಪ್ರತಿ ವಾರವೂ ಕೊಂಡುಕೊಳ್ಳಿರಿ!

"ಒಂದಾಣೆ ಮಾಲೆ"ಯ ಪುಸ್ತಕಗಳು, ಪ್ರತಿ ವಾರ ಪ್ರಕಟವಾಗುವೆ. ಹೊಸ ಹೊಸ ವಿಷಯಗಳ ಮೇಲೆ ಪುಸ್ತಕಗಳು ಹೊರಡುತ್ತಿವೆ. ...54 ನೇ ಸಪ್ಟಂಬರದಿಂದ 1962 ನೇ ಫೆಬ್ರವರಿ ತಿಂಗಳ ವರೆಗೆ 339 ಪುಸ್ತಕಗಳು ಪ್ರಕಟವಾಗಿವೆ.

339 ಆಣೆಗಳಿಗೆ 'ಒಂದಾಣೆ ಮಾಲೆ'ಯು, ಹೊದಿಕೆ ಕೂಡಿ, ಒಟ್ಟು 1750 ಪುಟಗಳನ್ನು ಕೊಟ್ಟಿರುತ್ತದೆ. ಇಷ್ಟು ಮೊಬಲಗಿಗೆ ಇಷ್ಟು ಪುಟಗಳನ್ನು ಬೇರೆ ಎಲ್ಲಿಯೂ ಯಾವ ಪ್ರಕಟಣೆಯೂ ಕೊಟ್ಟಿಲ್ಲ.

ವಿದ್ವಾಂಸರು ಮಾತ್ರ 'ಒಂದಾಣೆ ಮಾಲೆ'ಗೆ ಬರೆಯುತ್ತಾರೆ. 'ಅಶ್ಲೀಲ' ಎಂಬ ಅಂಶವೇ 'ಒಂದಾಣೆ ಮಾಲೆ'ಯ ಪ್ರಕಟಣೆಗಳಲ್ಲಿರುವುದಿಲ್ಲ.

'ಒಂದಾಣೆ ಮಾಲೆ' ಪುಸ್ತಕಗಳು ಚಿಕ್ಕ ವಿದ್ಯಾರ್ಥಿಗಳಿಂದ ವಯೋವೃದ್ಧರ ವರೆಗೆ, ಪ್ರತಿಯೊಬ್ಬನಿಗೂ ಅವಶ್ಯ ಇವೆ. ಇಷ್ಟು ಸುಲಭ ಬೆಲೆಯಲ್ಲಿ ಇಷ್ಟು ಉತ್ತಮ ಸಾಹಿತ್ಯವು, ಈ ಮೊದಲು ಎಲ್ಲಿಯೂ ಒದಗಿಸಲ್ಪಟ್ಟಿಲ್ಲ.

ಒಂದಾಣೆಮಾಲೆಯನ್ನು ಟಪ್ಪಾಲುದ್ವಾರ ತರಿಸಿಕೊಳ್ಳುವವರು ಪ್ರತಿಗೆ ಒಂದಾಣೆ ಮತ್ತು ಟಪ್ಪಾಲುಖರ್ಚು ಮೂರು ಪ್ರತಿಗಳಿಗೆ ಒಂದಾಣೆಯಂತೆ ಹಣವನ್ನು ಮನಿಯಾರ್ಡರ್ ಮೂಲಕ ಕಳಿಸಿ, ತಮಗೆ ಬೇಕಾದ ಪುಸ್ತಕಗಳ ನಂಬ್ರಗಳನ್ನು ತಿಳಿಸತಕ್ಕದ್ದು.

ವಾರಕ್ಕೆ ಕೇವಲ ಒಂದಾಣೆ ವ್ಯಯದಿಂದ ಒಂದು ಉತ್ಕೃಷ್ಟ—ಉಪಯುಕ್ತ ಪುಸ್ತಕವನ್ನು ಹೊಂದುವ ಈ ಯೋಜನೆಯ ಸದುಪಯೋಗ ...ಕೊಳ್ಳಿರಿ.

ಪ್ರಭಾತ ಆಫೀಸು, ರಥಬೀದಿ,

...ಗಳೂ...